



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಕಾಫ್. ಶ್ರೇಷ್ಠವಾದ ಕುರ್‌ಆನಿನಾಣೆ.

قٓ ۚ وَالْقُرْاٰنِ الْمَجِيْدِ ①

2. ವಾಸ್ತವದಲ್ಲಿ ಓರ್ವ ಎಚ್ಚರಿಕೆ ನೀಡುವವನು ಸ್ವತಃ ಇವರೊಳಗಿಂದಲೇ ಇವರ ಬಳಿಗೆ ಬಂದುದು ಇವರಿಗೆ ಸೋಜಿಗವೆನಿಸಿತು.[1] ತರುವಾಯ ಸತ್ಯನಿಷೇಧಿಗಳು ಹೇಳತೊಡಗಿದರು, "ಇದು ಸೋಜಿಗದ ವಿಷಯ-

بَلْ عَجِبُوْٓا اَنْ جَآءَهُمْ مُّنْذِرٌ
مِّنْهُمْ فَقَالَ الْكٰفِرُوْنَ هٰذَا شَيْءٌ عَجِيْبٌ ②

3. ನಾವು ಸತ್ತು ಹೋದ ಮೇಲೆ ಹಾಗೂ ಮಣ್ಣಾಗಿ ಹೋದ ಬಳಿಕ? (ಪುನಃ ಎಬ್ಬಿಸಲ್ಪಡುವೆವೇ?) ಈ ಮರಳುವಿಕೆಯು ಬುದ್ಧಿಗೆ ಮೀರಿದ ವಿಷಯವಾಗಿದೆ."[2]

ءَاِذَا مِتْنَا وَكُنَّا تُرَابًا ۚ ذٰلِكَ
رَجْعٌۢ بَعِيْدٌ ③

4. ಭೂಮಿಯು ಇವರ ಶರೀರದಿಂದ ಏನನ್ನೆಲ್ಲ ತಿಂದು ಬಿಡುತ್ತದೆಂದು ನಮಗೆ ಗೊತ್ತಿದೆ. ನಮ್ಮ ಬಳಿಯಲ್ಲೊಂದು ಗ್ರಂಥವಿದೆ. ಅದರಲ್ಲಿ ಎಲ್ಲವೂ ಸುರಕ್ಷಿತವಿದೆ.

قَدْ عَلِمْنَا مَا تَنْقُصُ الْاَرْضُ مِنْهُمْ ۚ
وَعِنْدَنَا كِتٰبٌ حَفِيْظٌ ④

5. ವಾಸ್ತವದಲ್ಲಿ ಸತ್ಯವು ಇವರ ಬಳಿಗೆ ಬಂದಾಗ ಇವರು ಆಗಲೇ ಅದನ್ನು ಸ್ಪಷ್ಟವಾಗಿ ನಿರಾಕರಿಸಿಬಿಟ್ಟರು. ಆದ್ದರಿಂದಲೇ ಇವರೀಗ ಪೇಚಿಗೆ ಸಿಲುಕಿಕೊಂಡಿರುವರು.

بَلْ كَذَّبُوْا بِالْحَقِّ لَمَّا جَآءَهُمْ فَهُمْ
فِيْٓ اَمْرٍ مَّرِيْجٍ ⑤

1. ಅರ್ಥಾತ್- ಮಕ್ಕಾ ನಿವಾಸಿಗಳು ಪ್ರವಾದಿವರ್ಯರ(ಸ) ಪ್ರವಾದಿತ್ವವನ್ನು ಯಾವುದೇ ಸೂಕ್ತ ಬುನಾದಿಯ ಆಧಾರದಲ್ಲಿ ನಿರಾಕರಿಸಿಲ್ಲ. ಬದಲಾಗಿ ಅವರಂತಹುದೇ ಒಬ್ಬ ಮಾನವ ಮತ್ತು ಅವರ ಜನಾಂಗಕ್ಕೆ ಸೇರಿದ ಒಬ್ಬ ವ್ಯಕ್ತಿ ದೇವನ ವತಿಯಿಂದ ಎಚ್ಚರಿಕೆ ಕೊಡುವವನಾಗಿ ಬರುವುದು ಅವರ ದೃಷ್ಟಿಯಲ್ಲಿ ಅತ್ಯಂತ ಆಶ್ಚರ್ಯಕರ ಸಂಗತಿಯಾಗಿದೆ ಎಂಬ ಅತ್ಯಂತ ಅನುಚಿತವಾದ ಬುನಾದಿಯಿಂದ ಅವರು ಪ್ರವಾದಿತ್ವವನ್ನು ನಿರಾಕರಿಸಿದ್ದಾರೆ.

2. ಇದು ಆ ವ್ಯಕ್ತಿಗಳ ಪಾಲಿನ ಎರಡನೆಯ ಆಶ್ಚರ್ಯದ ಸಂಗತಿ. ಮಾನವನೋರ್ವ ಪ್ರವಾದಿಯಾಗಿ ಬಂದಿದ್ದಾನೆ ಎಂಬುದು ಅವರ ಮೊದಲ ಆಶ್ಚರ್ಯವಾಗಿತ್ತು. ಮಾನವರೆಲ್ಲರೂ ಸತ್ತನಂತರ ಪುನಃ ಸೃಷ್ಟಿಸಲ್ಪಡುವರು ಮತ್ತು ಅವರನ್ನೆಲ್ಲಾ ಒಂದುಗೂಡಿಸಿ ಅಲ್ಲಾಹನ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗುವುದು ಎಂಬುದರಿಂದ ಅವರು ಪುನಃ ಆಶ್ಚರ್ಯಗೊಂಡರು.

6. ಸರಿ, ಇವರೆಂದಾದರೂ ತಮ್ಮ ಮೇಲಿರುವ ಆಕಾಶದ ಕಡೆಗೆ ನೋಡಿಲ್ಲವೇ? ನಾವು ಅದನ್ನು ಹೇಗೆ ನಿರ್ಮಿಸಿದೆವು ಮತ್ತು ಅಲಂಕರಿಸಿದೆವು. ಅದರಲ್ಲಿ ಎಲ್ಲೂ ಬಿರುಕಿಲ್ಲ.

أَفَلَمْ يَنظُرُوٓا إِلَى ٱلسَّمَآءِ فَوْقَهُمْ كَيْفَ
بَنَيْنَٰهَا وَزَيَّنَّٰهَا وَمَا لَهَا مِن فُرُوجٍ ٦

7. ಭೂಮಿಯನ್ನು ನಾವು ಹಾಸಿದೆವು, ಅದರಲ್ಲಿ ಪರ್ವತಗಳನ್ನು ನಾಟಿದೆವು ಮತ್ತು ಅದರೊಳಗೆ ಎಲ್ಲ ವಿಧದ ನಯನ ಮನೋಹರ ಸಸ್ಯಗಳನ್ನು ಬೆಳೆಸಿದೆವು.

وَٱلْأَرْضَ مَدَدْنَٰهَا وَأَلْقَيْنَا فِيهَا
رَوَٰسِىَ وَأَنۢبَتْنَا فِيهَا مِن كُلِّ
زَوْجٍۭ بَهِيجٍ ٧

8. ಇವೆಲ್ಲವೂ (ಸತ್ಯದ ಕಡೆಗೆ) ಮರಳುವ ಪ್ರತಿಯೊಬ್ಬ ದಾಸನ ಕಣ್ತೆರೆಸುವ ಮತ್ತು ಅವನಿಗೆ ಪಾಠ ಕೊಡುವ ವಸ್ತುಗಳಾಗಿವೆ.

تَبْصِرَةً وَذِكْرَىٰ لِكُلِّ عَبْدٍ مُّنِيبٍ ٨

9-10. ನಾವು ಆಕಾಶದಿಂದ ಸುಸಮೃದ್ಧ ನೀರನ್ನಿಳಿಸಿದೆವು. ತರುವಾಯ ಅದರಿಂದ ಉದ್ಯಾನಗಳನ್ನೂ ಕೊಯ್ಲಿನ ಧಾನ್ಯಗಳನ್ನೂ ಫಲಭರಿತ ಗೊಂಚಲುಗಳು ಪದರು ಪದರುಗಳಾಗಿರುವ ಎತ್ತರವಾದ ಖರ್ಜೂರದ ಮರಗಳನ್ನೂ ಸೃಷ್ಟಿಸಿದೆವು.

وَنَزَّلْنَا مِنَ ٱلسَّمَآءِ مَآءً مُّبَٰرَكًا
فَأَنۢبَتْنَا بِهِۦ جَنَّٰتٍ وَحَبَّ ٱلْحَصِيدِ ٩
وَٱلنَّخْلَ بَاسِقَٰتٍ لَّهَا طَلْعٌ نَّضِيدٌ ١٠

11. ಇದು, ದಾಸರಿಗೆ ಆಹಾರವೊದಗಿಸುವ ಏರ್ಪಾಡು. ಈ ನೀರಿನಿಂದ ನಾವು ಒಂದು ನಿರ್ಜೀವ ನೆಲಕ್ಕೆ ಜೀವದಾನ ಮಾಡುತ್ತೇವೆ. (ಸತ್ತು ಹೋದ ಮಾನವರು ಭೂಮಿಯಿಂದ) ಹೊರ ಬರುವುದೂ ಹೀಗೆಯೇ.

رِّزْقًا لِّلْعِبَادِ ۖ وَأَحْيَيْنَا بِهِۦ بَلْدَةً مَّيْتًا ۚ
كَذَٰلِكَ ٱلْخُرُوجُ ١١

12-14. ಇವರಿಗಿಂತ ಮುಂಚೆ ನೂಹರ ಜನಾಂಗವೂ ರಸ್ಸ್‌ನವರೂ ಸಮೂದರೂ ಆದ್‌ರೂ ಫಿರ್‌ಔನನೂ 'ಲೂತ'ರ ಸಹೋದರರೂ ಐಕಃದವರೂ 'ತುಬ್ಬಅ್' ಜನಾಂಗದವರೂ ಸುಳ್ಳಾಗಿಸಿದ್ದಾರೆ. ಎಲ್ಲರೂ ಸಂದೇಶವಾಹಕರನ್ನು ಸುಳ್ಳಾಗಿಸಿದರು. ಕೊನೆಗೆ ನನ್ನ ಎಚ್ಚರಿಕೆಯು ಅವರಿಗೆ ಅನ್ವಯವಾಗಿ ಬಿಟ್ಟಿತು.

كَذَّبَتْ قَبْلَهُمْ قَوْمُ نُوحٍ وَأَصْحَٰبُ
ٱلرَّسِّ وَثَمُودُ ١٢
وَعَادٌ وَفِرْعَوْنُ وَإِخْوَٰنُ لُوطٍ ١٣
وَأَصْحَٰبُ ٱلْأَيْكَةِ وَقَوْمُ تُبَّعٍ ۚ كُلٌّ
كَذَّبَ ٱلرُّسُلَ فَحَقَّ وَعِيدِ ١٤

15. ನಾವೇನು ಪ್ರಥಮ ಬಾರಿ ಸೃಷ್ಟಿಸಿ ಬಳಲಿದ್ದೇವೆಯೇ? ಆದರೂ ಇವರು ಒಂದು ಹೊಸ ಸೃಷ್ಟಿಯ ಬಗ್ಗೆ ಸಂಶಯಗ್ರಸ್ತರಾಗಿದ್ದಾರೆ.

أَفَعَيِينَا بِٱلْخَلْقِ ٱلْأَوَّلِ ۚ بَلْ هُمْ
فِى لَبْسٍ مِّنْ خَلْقٍ جَدِيدٍ ١٥

16. ನಾವು ಮಾನವನನ್ನು ಸೃಷ್ಟಿಸಿದ್ದೇವೆ ಮತ್ತು ನಾವು ಅವನ ಮನಸ್ಸಿನಲ್ಲಿ ಉದ್ಭವಿಸುವ ದುರ್ಭಾವನೆಗಳನ್ನೂ ಬಲ್ಲೆವು. ನಾವು ಅವನ ಕಂಠನಾಡಿಗಿಂತಲೂ ಹೆಚ್ಚು ಅವನಿಗೆ ಸಮೀಪವಿದ್ದೇವೆ.

وَلَقَدْ خَلَقْنَا ٱلْإِنسَٰنَ وَنَعْلَمُ مَا
تُوَسْوِسُ بِهِۦ نَفْسُهُۥ ۖ وَنَحْنُ أَقْرَبُ
إِلَيْهِ مِنْ حَبْلِ ٱلْوَرِيدِ ١٦

17. (ಮತ್ತು ನಮ್ಮ ಈ ಪ್ರತ್ಯಕ್ಷ ಜ್ಞಾನ ಮಾತ್ರವಲ್ಲದೆ) ಇಬ್ಬರು ಲೇಖಕರು ಅವನ ಬಲ ಹಾಗೂ ಎಡಭಾಗಗಳಲ್ಲಿ ಕುಳಿತು ಪ್ರತಿಯೊಂದು ವಿಷಯವನ್ನು ದಾಖಲಿಸುತ್ತಿರುವರು.	إِذْ يَتَلَقَّى الْمُتَلَقِّيَانِ عَنِ الْيَمِينِ وَعَنِ الشِّمَالِ قَعِيدٌ ﴿١٧﴾
18. ಅವನ ಬಾಯಿಯಿಂದ ಹೊರಡುವ ಯಾವ ಮಾತು ಕೂಡಾ, ಸದಾ ಸನ್ನದ್ಧನಿರುವ ಒಬ್ಬ ಕಾವಲುಗಾರನಿಂದ ದಾಖಲಿಸಲ್ಪಡದೆ ಇರುವುದಿಲ್ಲ.	مَا يَلْفِظُ مِنْ قَوْلٍ إِلَّا لَدَيْهِ رَقِيبٌ عَتِيدٌ ﴿١٨﴾
19. ಅದೋ ನೋಡಿರಿ, ಮರಣ ಸಂಕಟವು ಸತ್ಯದೊಂದಿಗೆ ಬಂದು ಬಿಟ್ಟಿತು. ನೀನು ತಪ್ಪಿಸಿಕೊಂಡು ಓಡುತ್ತಿದ್ದುದು ಇದರಿಂದಲೇ!	وَجَاءَتْ سَكْرَةُ الْمَوْتِ بِالْحَقِّ ۖ ذَٰلِكَ مَا كُنْتَ مِنْهُ تَحِيدُ ﴿١٩﴾
20. ಮತ್ತು ಸೂರ್ (ಕಹಳೆ) ಊದಲ್ಪಟ್ಟಿತು. ಇದುವೇ ನಿನ್ನನ್ನು ಎಚ್ಚರಿಸಲಾಗುತ್ತಿದ್ದ ದಿನ.	وَنُفِخَ فِي الصُّورِ ۚ ذَٰلِكَ يَوْمُ الْوَعِيدِ ﴿٢٠﴾
21. ಪ್ರತಿಯೊಬ್ಬನು ಒಬ್ಬ ಅಟ್ಟಿ ತರುವವ ಮತ್ತು ಒಬ್ಬ ಸಾಕ್ಷಿದಾರನ ಜೊತೆ ಬಂದು ಬಿಟ್ಟನು.	وَجَاءَتْ كُلُّ نَفْسٍ مَعَهَا سَائِقٌ وَشَهِيدٌ ﴿٢١﴾
22. ನೀನು ಇದರ ಬಗ್ಗೆ ಅಲಕ್ಷ್ಯನಾಗಿದ್ದೆ. ನಾವು ನಿನ್ನ ಮುಂದಿದ್ದ ತೆರೆಯನ್ನು ಸರಿಸಿಬಿಟ್ಟೆವು ಮತ್ತು ಇಂದು ನಿನ್ನ ದೃಷ್ಟಿಯು ಬಹಳ ತೀಕ್ಷ್ಣವಿದೆ.[3]	لَقَدْ كُنْتَ فِي غَفْلَةٍ مِنْ هَٰذَا فَكَشَفْنَا عَنْكَ غِطَاءَكَ فَبَصَرُكَ الْيَوْمَ حَدِيدٌ ﴿٢٢﴾
23. ಅವನ ಜೊತೆಗಿದ್ದವನು, "ನನ್ನ ವಶದಲ್ಲಿದ್ದವನು ಇದೋ ಹಾಜರಿದ್ದಾನೆ" ಎಂದು ಹೇಳುವನು.[4]	وَقَالَ قَرِينُهُ هَٰذَا مَا لَدَيَّ عَتِيدٌ ﴿٢٣﴾
24. ಅಪ್ಪಣೆಯಾಯಿತು- "ನರಕಕ್ಕೆ ಎಸೆದು ಬಿಡಿರಿ- ಪ್ರತಿಯೊಬ್ಬ ಕಟ್ಟಾ ಸತ್ಯನಿಷೇಧಿಯನ್ನು-	أَلْقِيَا فِي جَهَنَّمَ كُلَّ كَفَّارٍ عَنِيدٍ ﴿٢٤﴾
25. ಅವನು ಸತ್ಯವನ್ನು ದ್ವೇಷಿಸುತ್ತಿದ್ದನು. ಒಳಿತನ್ನು ತಡೆಯುವವನಾಗಿದ್ದನು. ಮೇರೆ ಮೀರುವವನಾಗಿದ್ದನು ಸಂಶಯಗ್ರಸ್ತನಾಗಿದ್ದನು-	مَنَّاعٍ لِلْخَيْرِ مُعْتَدٍ مُرِيبٍ ﴿٢٥﴾
26. ಮತ್ತು ಅಲ್ಲಾಹನೊಂದಿಗೆ ಇತರರನ್ನು ದೇವರಾಗಿ ಮಾಡಿ ಕೊಂಡಿದ್ದನು. ಅವನನ್ನು ಘೋರ ಯಾತನೆಯಲ್ಲಿ ಹಾಕಿಬಿಡಿರಿ."	الَّذِي جَعَلَ مَعَ اللَّهِ إِلَٰهًا آخَرَ فَأَلْقِيَاهُ فِي الْعَذَابِ الشَّدِيدِ ﴿٢٦﴾

3. ಅರ್ಥಾತ್- ಅಲ್ಲಾಹನ ಪ್ರವಾದಿಯು ಅರುಹಿದ್ದೆಲ್ಲವೂ ಅಲ್ಲಿರುವುದನ್ನು ಈಗ ಸ್ವತಃ ನೀವೇ ಕಾಣುತ್ತಿರುವಿರಿ.
4. ಜೊತೆಗಿದ್ದವನು ಎಂದರೆ ಅಟ್ಟಿಸಿ ತರುವ ದೇವಚರವಾಗಿದೆ. ಅದು ದೇವನ ಸನ್ನಿಧಿಗೆ ತಲಪಿ, "ಪ್ರಭು! ನನ್ನ ವಶದಲ್ಲಿದ್ದವನನ್ನು ಇಗೋ ನಿನ್ನ ಮುಂದೆ ಹಾಜರುಪಡಿಸುತ್ತಿದ್ದೇನೆ" ಎಂದು ಹೇಳುವುದು.
5. ಇಲ್ಲಿ ಜೊತೆಗಾರನೆಂದರೆ ಅವಿಧೇಯ ವ್ಯಕ್ತಿಯ ಜತೆಗೆ ಲೋಕದಲ್ಲಿ ಜತೆಗೂಡಿರುವ ಪಿಶಾಚಿಯಾಗಿದೆ.

27. ಅವನ ಜೊತೆಗಾರನು ಹೇಳಿದನು[5]- "ನನ್ನ ಪ್ರಭೂ, ನಾನು ಇವನನ್ನು ವಿದ್ರೋಹಿಯಾಗಿ ಮಾಡಲಿಲ್ಲ. ನಿಜವಾಗಿ ಇವನು ತಾನಾಗಿಯೇ ಅತ್ಯಂತ ನಿಕೃಷ್ಟ ದರ್ಜೆಯ ಪಥಭ್ರಷ್ಟತೆಯಲ್ಲಿ ಬಿದ್ದುಕೊಂಡಿದ್ದನು."

قَالَ قَرِينُهُۥ رَبَّنَا مَآ أَطْغَيْتُهُۥ وَلَٰكِن كَانَ فِى ضَلَٰلٍۭ بَعِيدٍ ﴿٢٧﴾

28. ಉತ್ತರ ಬಂತು - "ನನ್ನ ಸಮ್ಮುಖದಲ್ಲಿ ಜಗಳಾಡಬೇಡಿರಿ. ನಾನು ನಿಮಗೆ ದುಷ್ಪರಿಣಾಮದ ಬಗ್ಗೆ ಮೊದಲೇ ಎಚ್ಚರಿಸಿದ್ದೆ.

قَالَ لَا تَخْتَصِمُوا۟ لَدَىَّ وَقَدْ قَدَّمْتُ إِلَيْكُم بِٱلْوَعِيدِ ﴿٢٨﴾

29. ನನ್ನಲ್ಲಿ ಮಾತು ಬದಲಾಯಿಸಲ್ಪಡುವುದಿಲ್ಲ ಮತ್ತು ನಾನು ನನ್ನ ದಾಸರ ಮೇಲೆ ಅಕ್ರಮವೆಸಗುವವನಲ್ಲ."

مَا يُبَدَّلُ ٱلْقَوْلُ لَدَىَّ وَمَآ أَنَا۠ بِظَلَّٰمٍ لِّلْعَبِيدِ ﴿٢٩﴾ ربع

30. ಅಂದು ನಾವು ನರಕದೊಡನೆ- "ನೀನು ತುಂಬಿದೆಯಾ?" ಎಂದು ಕೇಳುವೆವು. ಆಗ ಅದು, "ಇನ್ನಷ್ಟು ಇದೆಯೇ?" ಎಂದು ಕೇಳುವುದು.[6]

يَوْمَ نَقُولُ لِجَهَنَّمَ هَلِ ٱمْتَلَأْتِ وَتَقُولُ هَلْ مِن مَّزِيدٍ ﴿٣٠﴾

31. ಸ್ವರ್ಗವನ್ನು 'ಧರ್ಮನಿಷ್ಠರ' ಸಮೀಪಕ್ಕೆ ತರಲಾಗುವುದು. ಸ್ವಲ್ಪವೂ ದೂರವಿರಲಾರದು.

وَأُزْلِفَتِ ٱلْجَنَّةُ لِلْمُتَّقِينَ غَيْرَ بَعِيدٍ ﴿٣١﴾

32. "ನಿಮಗೆ ವಾಗ್ದಾನವೀಯಲಾಗುತ್ತಿದ್ದ ವಸ್ತು ಇದೇ ಆಗಿದೆ. ಬಹಳಷ್ಟು ಪಶ್ಚಾತ್ತಾಪ ಪಟ್ಟು ಮರಳುತ್ತಿದ್ದ[7] ಮತ್ತು ಬಹಳ ಎಚ್ಚರಿಕೆ ವಹಿಸುತ್ತಿದ್ದ[8] ಪ್ರತಿಯೊಬ್ಬನಿಗಾಗಿ.

هَٰذَا مَا تُوعَدُونَ لِكُلِّ أَوَّابٍ حَفِيظٍ ﴿٣٢﴾

33. ಅವನು ಕಣ್ಣಾರೆ ಕಾಣದೆಯೇ ರಹ್ಮಾನನಿಗೆ ಭಯಪಡುತ್ತಿದ್ದನು, ಒಲಿದ ಹೃದಯದೊಂದಿಗೆ ಬಂದಿರುವನು.

مَّنْ خَشِىَ ٱلرَّحْمَٰنَ بِٱلْغَيْبِ وَجَآءَ بِقَلْبٍ مُّنِيبٍ ﴿٣٣﴾

34. ಶಾಂತಿಯೊಂದಿಗೆ ಸ್ವರ್ಗವನ್ನು ಪ್ರವೇಶಿಸಿರಿ" ಅದು ಶಾಶ್ವತ ಜೀವನದ ದಿನವಾಗಿರುವುದು.

ٱدْخُلُوهَا بِسَلَٰمٍ ۖ ذَٰلِكَ يَوْمُ ٱلْخُلُودِ ﴿٣٤﴾

35. ಅಲ್ಲಿ ಅವರಿಗಾಗಿ ಅವರು ಬಯಸಿದ್ದೆಲ್ಲವೂ ಇರುವುದು ಮತ್ತು ಅವರಿಗಾಗಿ ಅದಕ್ಕಿಂತಲೂ ಬಹಳಷ್ಟು ಹೆಚ್ಚು ನಮ್ಮಲ್ಲಿದೆ.

لَهُم مَّا يَشَآءُونَ فِيهَا وَلَدَيْنَا مَزِيدٌ ﴿٣٥﴾

---

6. ಇದಕ್ಕೆ ಎರಡು ಅರ್ಥಗಳಿರಲು ಸಾಧ್ಯವಿದೆ. ಮೊದಲನೆಯದಾಗಿ, "ಇನ್ನಷ್ಟು ವ್ಯಕ್ತಿಗಳನ್ನು ಸೇರಿಸಲು ನನ್ನಲ್ಲಿ ಅವಕಾಶವಿಲ್ಲ" ಎರಡನೆಯದಾಗಿ, "ಇನ್ನೆಷ್ಟು ಅಪರಾಧಿಗಳಿದ್ದರೂ ಅವರನ್ನು ಕರೆತನ್ನಿರಿ."
7. ಆಜ್ಞೋಲ್ಲಂಘನೆ ಮತ್ತು ಸ್ವೇಚ್ಛಾಚಾರದ ಮಾರ್ಗವನ್ನು ಬಿಟ್ಟು ಅನುಸರಣೆ ಮತ್ತು ಅಲ್ಲಾಹನ ಸಂಪ್ರೀತಿಯ ಮಾರ್ಗವನ್ನು ಪಾಲಿಸುವವನು, ಅಲ್ಲಾಹನನ್ನು ಅತಿ ಹೆಚ್ಚು ಸ್ಮರಿಸುವವನು ಮತ್ತು ತನ್ನೆಲ್ಲಾ ವ್ಯವಹಾರಗಳಲ್ಲಿ ಅವನೆಡೆಗೆ ಮರಳುವವನು ಎಂಬುದು ಇದರ ಅರ್ಥವಾಗಿದೆ.
8. ಅರ್ಥಾತ್- ಅಲ್ಲಾಹನ ಮೇರೆಗಳು, ಕರ್ತವ್ಯಗಳು, ವಿಧಿನಿಷೇಧಗಳು ಮತ್ತು ತನ್ನ ವಶಕ್ಕೊಪ್ಪಿಸಲಾದ ಅವನ ಅಮಾನತ್ತುಗಳನ್ನು ಸಂರಕ್ಷಿಸುವವನು, ಪ್ರತಿಸಂದರ್ಭದಲ್ಲೂ ತಾನು ಮಾತು-ಕೃತಿಯಲ್ಲಿ ಪ್ರಭುವಿನ ಆಜ್ಞೋಲ್ಲಂಘನೆ ಮಾಡುತ್ತಿರುವೆನೋ ಎಂದು ಆತ್ಮವಿಮರ್ಶೆ ಮಾಡಿಕೊಳ್ಳುತ್ತಿರುವವನು.

36. ನಾವು ಇವರಿಗಿಂತ ಮುಂಚೆ ಅನೇಕ ಜನಾಂಗಗಳನ್ನು ನಾಶಗೊಳಿಸಿದ್ದೇವೆ. ಅವು ಇವರಿಗಿಂತ ತುಂಬಾ ಬಲಶಾಲಿಗಳಾಗಿದ್ದುವು ಮತ್ತು ಅವರು ಜಗತ್ತಿನ ದೇಶಗಳನ್ನು ಜಾಲಾಡಿದ್ದರು. ಮತ್ತೇನು ಅವರು ಯಾವುದಾದರೂ ಅಭಯ ಸ್ಥಾನವನ್ನು ಪಡೆದರೇ?

وَكَمْ اَهْلَكْنَا قَبْلَهُمْ مِّنْ قَرْنٍ هُمْ
اَشَدُّ مِنْهُمْ بَطْشًا فَنَقَّبُوْا فِى الْبِلَادِؕ
هَلْ مِنْ مَّحِيْصٍ ﴿۳۶﴾

37. ಹೃದಯವುಳ್ಳ ಅಥವಾ ಲಕ್ಷ್ಯಕೊಟ್ಟು ಮಾತು ಕೇಳುವ ಪ್ರತಿಯೊಬ್ಬನಿಗೆ ಈ ಇತಿಹಾಸದಲ್ಲಿ ಬೋಧಪ್ರದ ಪಾಠವಿದೆ.

اِنَّ فِىْ ذٰلِكَ لَذِكْرٰى لِمَنْ كَانَ
لَهٗ قَلْبٌ اَوْ اَلْقَى السَّمْعَ وَهُوَ شَهِيْدٌ ﴿۳۷﴾

38. ನಾವು ಭೂಮಿ - ಆಕಾಶಗಳನ್ನೂ ಅವುಗಳ ನಡುವೆ ಇರುವ ಸಕಲ ವಸ್ತುಗಳನ್ನೂ ಆರು ದಿನಗಳಲ್ಲಿ ಸೃಷ್ಟಿಸಿದೆವು. ನಮಗೇನೂ ದಣಿವಾಗಲಿಲ್ಲ.

وَلَقَدْ خَلَقْنَا السَّمٰوٰتِ وَالْاَرْضَ
وَمَا بَيْنَهُمَا فِىْ سِتَّةِ اَيَّامٍ ۖ وَّمَا
مَسَّنَا مِنْ لُّغُوْبٍ ﴿۳۸﴾

39. ಆದುದರಿಂದ ಸಂದೇಶವಾಹಕರೇ, ಇವರಾಡುವ ಮಾತುಗಳ ಬಗ್ಗೆ ತಾಳ್ಮೆ ವಹಿಸಿರಿ ಮತ್ತು ಸೂರ್ಯೋದಯಕ್ಕೆ ಮುಂಚೆಯೂ ಸೂರ್ಯಾಸ್ತಕ್ಕೆ ಮುಂಚೆಯೂ ನಿಮ್ಮ ಪ್ರಭುವಿನ ಪ್ರಶಂಸೆ ಮಾಡುತ್ತಾ ಅವನನ್ನು ಜಪಿಸಿರಿ-

فَاصْبِرْ عَلٰى مَا يَقُوْلُوْنَ وَسَبِّحْ
بِحَمْدِ رَبِّكَ قَبْلَ طُلُوْعِ الشَّمْسِ
وَقَبْلَ الْغُرُوْبِ ﴿۳۹﴾

40. ಮತ್ತು ಪುನಃ ರಾತ್ರಿ ವೇಳೆಯೂ ಸಾಷ್ಟಾಂಗವೆರಗಿದ ಬಳಿಕವೂ ಅವನನ್ನು ಜಪಿಸಿರಿ.[9]

وَمِنَ الَّيْلِ فَسَبِّحْهُ وَاَدْبَارَ السُّجُوْدِ ﴿۴۰﴾

41. ಕೇಳಿರಿ! ಘೋಷಿಸುವವನು (ಪ್ರತಿಯೊಬ್ಬನ) ಸಮೀಪದಿಂದಲೇ ಘೋಷಿಸುವ ದಿನ[10]-

وَاسْتَمِعْ يَوْمَ يُنَادِ الْمُنَادِ مِنْ مَّكَانٍ
قَرِيْبٍ ﴿۴۱﴾

42. ಮತ್ತು ಲೋಕಾಂತ್ಯದ ಕಹಳೆಯನ್ನು ಎಲ್ಲರೂ ಸರಿಯಾಗಿ ಕೇಳುತ್ತಿರುವ ದಿನವು ಭೂಮಿಯಿಂದ ಮೃತರು ಹೊರಬರುವ ದಿನವಾಗಿರುವುದು.

يَّوْمَ يَسْمَعُوْنَ الصَّيْحَةَ بِالْحَقِّ ؕ ذٰلِكَ
يَوْمُ الْخُرُوْجِ ﴿۴۲﴾

43. ನಾವೇ ಜೀವದಾನ ಮಾಡುತ್ತೇವೆ ಮತ್ತು ನಾವೇ ಮರಣ ಕೊಡುತ್ತೇವೆ.

اِنَّا نَحْنُ نُحْىٖ وَنُمِيْتُ وَاِلَيْنَا الْمَصِيْرُ ﴿۴۳﴾

---

9. ಪ್ರಭುವಿನ ಪ್ರಶಂಸೆ ಮಾಡುತ್ತಾ ಅವನನ್ನು ಜಪಿಸುವುದೆಂದರೆ ನಮಾಝ್ ಮಾಡುವುದಾಗಿದೆ. ಸೂರ್ಯೋದಯಕ್ಕೆ ಮೊದಲಿನ ನಮಾಝ್ ಫಜ್ರ್ ನಮಾಝ್ ಆಗಿದೆ. ಸೂರ್ಯಾಸ್ತಮಾನಕ್ಕೆ ಮೊದಲು ಎರಡು ನಮಾಝ್‌ಗಳಿವೆ. ಒಂದು ಝುಹರ್ ಮತ್ತೊಂದು ಅಸರ್. ರಾತ್ರಿಯ ವೇಳೆ ಮಗ್ರಿಬ್ ಮತ್ತು ಇಷಾ ನಮಾಝ್‌ಗಳಿವೆ. ಮೂರನೆಯದಾಗಿ ತಹಜ್ಜುದ್ ನಮಾಝ್ ಕೂಡ ರಾತ್ರಿಯ ತಸ್ಬೀಹ್‌ನಲ್ಲಿ ಸೇರಿದೆ.

10. ಅರ್ಥಾತ್- ಯಾರು ಎಲ್ಲಿ ಸತ್ತು ಬಿದ್ದಿರುವನೋ ಅಥವಾ ಲೋಕದಲ್ಲಿ ಎಲ್ಲಿ ಅವನು ನಿಧನನಾಗಿರುವನೋ ಅಲ್ಲೇ ಅವನಿಗೆ, "ಎದ್ದೇಳು, ನಡೆ ನಿನ್ನ ಪ್ರಭುವಿನೆಡೆಗೆ, ನಿನ್ನ ಲೆಕ್ಕ ಸಮರ್ಪಣೆಗಾಗಿ" ಎಂಬ ದೇವವಾಣಿ ಕೇಳಿಸುವುದು. ಈ ವಾಣಿ ಹೇಗಿರುವುದೆಂದರೆ ಭೂಮುಖದ ಪ್ರತಿಯೊಂದು ಕ್ಷೇತ್ರದಲ್ಲಿ ಅದನ್ನು ಕೇಳುವ ಪ್ರತಿಯೊಬ್ಬನಿಗೂ ಕರೆಯುವವನು ಎಲ್ಲೋ ಹತ್ತಿರದಿಂದಲೇ ಕರೆದಿದ್ದಾನೆ ಎಂದು ಭಾಸವಾಗುವುದು.

يَوْمَ تَشَقَّقُ الْأَرْضُ عَنْهُمْ سِرَاعًا ۚ
ذَٰلِكَ حَشْرٌ عَلَيْنَا يَسِيرٌ ﴿٤٤﴾

44. ಭೂಮಿಯು ಬಿರಿದು ಜನರು ಅದರೊಳಗಿನಿಂದ ಹೊರಟು ವೇಗವಾಗಿ ಓಡುತ್ತಿರುವ ಆ ದಿನ ಎಲ್ಲರೂ ನಮ್ಮ ಕಡೆಗೇ ಮರಳಬೇಕಾಗಿದೆ. ಈ ಹಶ್ರ್ (ಒಟ್ಟುಗೂಡಿಸುವಿಕೆಯು) ನಮಗೆ ಅತಿ ಸುಲಭ.

نَحْنُ أَعْلَمُ بِمَا يَقُولُونَ وَمَا أَنْتَ
عَلَيْهِمْ بِجَبَّارٍ ۖ فَذَكِّرْ بِالْقُرْآنِ
مَنْ يَخَافُ وَعِيدِ ﴿٤٥﴾ ٣ ع ١٧

45. ಸಂದೇಶವಾಹಕರೇ, ಇವರು ಕಟ್ಟುತ್ತಿರುವ ಮಾತುಗಳನ್ನು ನಾವು ಚೆನ್ನಾಗಿ ಬಲ್ಲೆವು. ಇವರನ್ನು ಬಲಾತ್ಕಾರವಾಗಿ ಒಪ್ಪುವಂತೆ ಮಾಡುವುದು ನಿಮ್ಮ ಕೆಲಸವಲ್ಲ. ನೀವು ನನ್ನ ಎಚ್ಚರಿಕೆಯ ಭಯವಿರುವವರಿಗೆ ಈ ಕುರ್‌ಆನಿನ ಮೂಲಕ ಉಪದೇಶ ನೀಡಿರಿ.
